# ಸಂಪಾದಕೀಯ



ಇಂದಿನ ಜ್ಞಾನ ವಿಜ್ಞಾನ-ತಂತ್ರಜ್ಞಾನದ ಕಲಿಕಾಲದಲ್ಲಿ ಸಾಮಾಜಿಕ ಜಾಲತಾಣದ ಅಂತರ್ಜಾಲದಲ್ಲಿ ಜಗತ್ತು ಇಂದು ಸಂಕುಚಿತಗೊಂಡಿದೆ. ಬಾಲಕರಿಂದ ಹಿಡಿದು ಹದಿಹರೆಯದ ಮಕ್ಕಳನ್ನು, ಮುದುಕರನ್ನು ಈ ಮಾಯೆಯ ಅಂತರ್ಜಾಲ ವ್ಯಾಪಿಸಿಕೊಂಡಿದೆ. ಈ ಜಾಲದಲ್ಲಿ ಒಮ್ಮೆ ಸಿಕ್ಕಿಹಾಕಿಕೊಂಡರೆ ಹೊರಬರುವುದು ಕಷ್ಟಸಾಧ್ಯ. ಚಿಕ್ಕ-ಚಿಕ್ಕ ಮಕ್ಕಳೂ ಸಹ ಬಣ್ಣ-ಬಣ್ಣದ ಸ್ಮಾರ್ಟ್-ಫೋನ್‌ಗಳ ವಶೀಕರಣಗೊಳಗಾಗುತ್ತಿದ್ದಾರೆ. ಅವರ ಮಾನಸಿಕ-ದೈಹಿಕ ಬೆಳವಣಿಗೆಯ ಮೇಲೆ ಆಘಾತವಾಗುತ್ತಿರುವ ಬಗ್ಗೆ ಸಂಶೋಧನಾತ್ಮಕ ವರದಿಗಳು ಬರುತ್ತಿವೆ. ಒಂದು ಅಂಕಿ-ಅಂಶದ ಪ್ರಕಾರ ಶೇಕಡ 50 ವಿದ್ಯಾರ್ಥಿ ಯುವ ಸಮೂಹ ಜಾಲತಾಣದ ಬಲೆಗೆ ಬಿದ್ದಿದೆ. ಅವರ ವಿದ್ಯಾಭ್ಯಾಸ-ಕಲಿಕೆಗೆ ಅಡ್ಡಿಯುಂಟಾಗಿದೆ. ಇದರಿಂದ ಅವರ ಸಾಧನೆ ಶೂನ್ಯ.

ಫೇಸ್ ಬುಕ್, ಇಂಸ್ಟಾಗ್ರಾಮ್, ವಾಟ್ಸ್ ಅಪ್ ಮೂಲಕ ಅನೇಕ ಮಕ್ಕಳು ತಮ್ಮ ಉಜ್ವಲ ಭವಿಷ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಯುವಜನತೆಯ ಶಕ್ತಿ, ಸಮಯ ಹಣದ ಅಪವ್ಯಯವಾಗುತ್ತಿದೆ, ಇದು ನಿಲ್ಲಬೇಕು. ಸಂಶೋಧನೆಗಳೆಲ್ಲವೂ ಉಪಯುಕ್ತವಾಗಿಯೇ ಪರಿಣಮಿಸುವವೆಂದು ಹೇಳಲಾಗದು, ಗುಣದೋಷಗಳೆರಡೂ ಇರುವವು. ನಾವು ಸುಸಂಸ್ಕೃತರಾದಂತೆ, ವಿವೇಕಿಗಳಾದಂತೆ ಅನಾಹುತಗಳನ್ನು ತಡೆಹಿಡಿಯಬಹುದು. ಆರಂಭದಲ್ಲಿ ದೂರದರ್ಶನದ ಆಗಮನವಾದಾಗ ಅದರ ದುರುಪಯೋಗದಿಂದ 'ಮೂರ್ಖರ ಪೆಟ್ಟಿಗೆ' ಎಂದು ನಾಮಕರಣವಾಗಿತ್ತು. ಇಂದು ನಮ್ಮ ಯುವಜನತೆ ಅಂತರ್ಜಾಲದ ಸದುಪಯೋಗ ಮಾಡಿಕೊಳ್ಳದೇ ದುರುಪಯೋಗ ಮಾಡಿಕೊಳ್ಳುತ್ತಾ ಅವರ ನಡೆ-ನುಡಿ ನೈತಿಕ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಮಾನವನ ಸರ್ವತೋಮುಖ ಪ್ರಗತಿಗೆ ಜ್ಞಾನ?ವಿಜ್ಞಾನ-ತಂತ್ರಜ್ಞಾನದ ಪ್ರಾಮುಖ್ಯತೆ ಅಮೂಲ್ಯವಾಗಿದೆ. ಇದರ ದುರುಪಯೋಗ ಹಿಂಸೆ, ಅತ್ಯಾಚಾರ, ಕೊಲೆ, ದರೋಡೆ, ಅನ್ಯಾಯಗಳಿಗೆ ಪ್ರೇರಣೆಯಾಗುತ್ತಿದೆ. ಕೆಲವು ಜಾಲತಾಣಗಳು ಭಯೋತ್ಪಾದನೆ, ಹಿಂಸೆ ಇತ್ಯಾದಿ ದೃಶ್ಯಾವಳಿಗಳನ್ನು ಪ್ರದರ್ಶಿಸುತ್ತಾ ಸಮಾಜದ ಏಳ್ಗೆಗೆ ಮಾರಕವಾಗಿದೆ.

ಇಂದಿನ ಕಂಪ್ಯೂಟರ್ ಯುಗದಲ್ಲಿ ಯಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಸೌಲಭ್ಯ ಕೊಡಲಾಗುತ್ತಿದೆ. ಸೃಜನಶೀಲತೆಗೆ ಪ್ರಾಮುಖ್ಯತೆ ಇಲ್ಲ. ಮಕ್ಕಳಲ್ಲಿ ಒಳ್ಳೆಯ ಆಲೋಚನೆಗಳು ಬೆಳೆಯಬೇಕು ಆಗ ಸೃಜನಶೀಲತೆ ಸಾಧ್ಯ. ಬಾಲಕರಿರುವಾಗಲೇ ನೀತಿ ನಿಯಮ ಕಲಿಸಬೇಕು. ಸದುಪಯೋಗ-ದುರುಪಯೋಗ ಗೊತ್ತಾಗಬೇಕು. ನಾವಿಂದು ವಿದ್ಯಾರ್ಥಿಗಳನ್ನು ಯಂತ್ರಗಳಾಗಿಸುತ್ತಿದ್ದೇವೆಯೇ ಹೊರತು ಮಾನವೀಯ ಮೌಲ್ಯಗಳುಳ್ಳ ಉತ್ತಮ ನಾಗರಿಕರನ್ನಾಗಿಸುತ್ತಿಲ್ಲ. ಶಿಕ್ಷಣದ ಮೂಲ ಉದ್ದೇಶವೇ ಮಾನವೀಯ ಮೌಲ್ಯ. ಇಂದಿನ ಜಲಮಾಲಿನ್ಯ, ವಾಯುಮಾಲಿನ್ಯಗಳಿಗಿಂತ ಅತ್ಯಂತ ಭಯಾನಕವಾದದ್ದು ನೈತಿಕತೆಯ ಮಾಲಿನ್ಯ' ಎನ್ನುವುದು ಶಿಕ್ಷಣ ತಜ್ಞರ ಅಭಿಪ್ರಾಯ.

ಅನೇಕ ಪೈಶಾಚಿಕ ಕೃತ್ಯಗಳು ನಡೆಯಲಿಕ್ಕೆ ಅಂತರ್ಜಾಲಗಳ ಪ್ರಾಮುಖ್ಯತೆಯೂ ಒಂದು ಕಾರಣ. ದೆಹಲಿಯ ನಿರ್ಭಯಾಳ ರೇಪ್ ಮತ್ತು ಕೊಲೆ ಇತ್ತೀಚಿಗೆ ಹೈದರಾಬಾದಿನಲ್ಲಿ ಪಶು ವೈದ್ಯಳ ರೇಪ್ ಅತ್ಯಾಚಾರ-ಭರ್ಬರ ಕೊಲೆ ನೆನೆಸಿಕೊಂಡರೆ ಮೈ ಜುಮ್ ಎನ್ನುತ್ತದೆ. ಇಂದಿನ ಪಾಲಕರು, ಶಿಕ್ಷಕರು ಹಾಗೂ ಸಮುದಾಯ ಜಾಗೃತವಾಬೇಕಿದೆ. ಇಂದು ಮಕ್ಕಳ ಕಲಿಕೆಯಲ್ಲಿ ಅಂಕಗಳಿಗೆ ಪ್ರಾಮುಖ್ಯತೆ ಕೊಡುತ್ತೇವೆ. ಅಂಕಗಳಿಕೆಯೊಂದಿಗೆ ಮೌಲ್ಯಾಧಾರಿತ ಶಿಕ್ಷಣಕ್ಕೂ ಒತ್ತು ನೀಡಬೇಕು. ಪಠ್ಯ ಹಾಗೂ ಪಠ್ಯೇತರ ವಿಷಯಗಳ ಮೂಲಕ ಮಕ್ಕಳಿಗೆ ನೈತಿಕ ಶಿಕ್ಷಣ ನೀಡಬೇಕು.

ಮಕ್ಕಳಲ್ಲಿಆತ್ಮಾಭಿಮಾನ, ಆತ್ಮವಿಶ್ವಾಸ ಹಾಗೂ ಸೃಜನಶೀಲತೆಯನ್ನು ಬೆಳೆಸಬೇಕು. ಮಕ್ಕಳನ್ನು ದ್ವೇಷಿಸದೇ ಪ್ರೀತಿಸುತ್ತ ಸೃಜನಶೀಲತೆಯನ್ನು, ಅರಿವನ್ನು ಮೂಡಿಸಿದರೆ ಮಕ್ಕಳು ದಾರಿ ತಪ್ಪಲಾರರು. ಸರಿ-ತಪ್ಪಿನ ಅರಿವಾದರೆ ಸಾಮಾಜಿಕ ಜಾಲತಾಣಗಳ ಸದುಪಯೋಗ ಸಾಧ್ಯವಾಗಿ ಮಕ್ಕಳ ಉಜ್ವಲ ಭವಿಷ್ಯಕ್ಕೆ ನಾಂದಿ ಹಾಡುತ್ತಾ 'ಅಂತರ್ಜಾಲದ' ಅವಾಂತರದಿಂದ ಪಾರಾಗಬಹುದು!

**ಪ್ರಗತಿ:**

- ಅಂತರ್ಜಾಲದ ಮೂಲಕ ನಮ್ಮ ಯುವ ಸಮುದಾಯ ಹೆಚ್ಚಿನ ಜ್ಞಾನವನ್ನು, ಹೊಸ ವಿಚಾರವನ್ನು ತಿಳಿದುಕೊಂಡು ಬದುಕನ್ನು ಹಸನಮಾಡಿಕೊಳ್ಳಬಹುದು. ಈ ದಿಶೆಯಲ್ಲಿ ಹೊಸ ಅವಿಷ್ಕಾರಗಳು ನಡೆಯುತ್ತಿರುತ್ತವೆ. ಅವುಗಳ ಸಹಕಾರದಿಂದ ಕೌಶಲ್ಯಾಭಿವೃದ್ಧಿ ಮಾಡಿಕೊಳ್ಳಬಹುದು.
- ಆಧುನಿಕ ಯುಗದಲ್ಲಿ ಅಂತರ್ಜಾಲದ ಸದುಪಯೋಗವನ್ನು ಯುವಕರು ಮಾಡಿಕೊಳ್ಳುತ್ತಾ ಕಲಿಕಾ ಪ್ರೇರಣೆ ಪಡೆದು ಅನುಭವದ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಸಾಧ್ಯ. ಗುಂಪುಚರ್ಚೆ, ಸಮಾಲೋಚನೆ, ಅನ್ವೇಷಣೆ ಇತ್ಯಾದಿ.
- ಕಲಿಕೆ ನಿಂತ ನೀರಾಗಬಾರದು. ಅಂತರ್ಜಾಲದ ನವ ನವೀನ ವಿಚಾರಗಳನ್ನು ಬದಲಾವಣೆಗಳನ್ನು ತಿಳಿದುಕೊಂಡು, ಪ್ರೊಜೆಕ್ಟ್‌ವರ್ಕ್, ಕ್ರಿಯೇಟಿವ್ ಐಡಿಯಾ, ಇನ್ಸ್‌ಪಿರೇಷನ್, ಮೋಟಿವೇಶನ್ ಮುಂತಾದವುಗಳನ್ನು ನಮ್ಮ ಮಕ್ಕಳು ಆಸಕ್ತಿಯಿಂದ ಬೆಳೆಸಿಕೊಂಡರೆ ಅಂತರ್ಜಾಲದ ಸದುಪಯೋಗವಾದಂತೆ.

ಕ್ರಿಸ್ತನಿಲ್ಲದೆ ಕ್ರಿಸ್ಮಸ್ ಇಲ್ಲ. ನಮ್ಮ ಜೀವನದ ನಾಗಾಲೋಟದಲ್ಲಿ ಕ್ರಿಸ್ತನ ಮಾರ್ಗಗಳನ್ನು ಹುಡುಕಿ, ಅನುಸರಿಸಿ ಜೀವಿಸಲು ಇಂದು ಅವರು ಕರೆ ನೀಡುತ್ತಿದ್ದಾರೆ. ಅವರ ಸತ್ಯ, ಮಾರ್ಗ ಹಾಗೂ ಪ್ರೀತಿಯ ಜೀವನವನ್ನು ನಾವು ಪಾಲಿಸಿ ಅವರ ಯೋಗ್ಯ ಹಿಂಬಾಲಕರಾಗೋಣ.

ಸರ್ವರಿಗೂ ಕ್ರಿಸ್ಮಸ್ ಹಾಗೂ ಹೊಸ ವರ್ಷದ
ಶುಭಾಷಯಗಳನ್ನು ಕೋರುತ್ತೇನೆ.

**ಸಿ. ಜೋಯೆಲ್, ನಿರ್ದೇಶಕಿ**

# ತಂದೆ ಕೊಟ್ಟ ಕೊಡುಗೆ

ಒಂದು ಹಳ್ಳಿಯಲ್ಲಿ ಹೊನ್ನಯ್ಯನೆಂಬ ರೈತನಿದ್ದ. ಶ್ರಮಪಟ್ಟು ದುಡಿದು ಅವನು ಧನಿಕನಾದ. ಹಿರಿಯರಿಂದ ಬಂದ ಹೊಲವನ್ನು ಸದ್ಬಳಕೆ ಮಾಡಿದ. ಒಳ್ಳೆಯ ಫಸಲು ತೆಗೆದ. ಉಳಿತಾಯವನ್ನೂ ಮಾಡಿದ. ಅವನಿಗೆ ತಿಮ್ಮಯ್ಯ ಎಂಬ ಮಗನಿದ್ದ. ಮಗ ಹೆಚ್ಚು ಕಷ್ಟಪಡಬಾರದೆಂದು ಹೊನ್ನಯ್ಯನ ಹೆಂಡತಿಯ ಬಯಕೆ. ಮಳೆ ಚಳಿಯೆನ್ನದೆ ಗಂಡ ಹೊಲಕ್ಕೆ ದುಡಿಯಲು ಹೋಗುವಾಗ ಸಹಾಯಕ್ಕೆಂದು ಮಗನನ್ನು ಕರೆದರೆ ಅವಳು, “ನೀವು ದುಡಿದು ಸೊರಗಿದ್ದು ಸಾಲದೆ? ಹೇಗೂ ಸಾಕಷ್ಟು ಸಂಪತ್ತು ಶೇಕರಿಸಿ ಇಟ್ಟಿದ್ದೀರಲ್ಲ. ಇನ್ನು ಅವನೇಕೆ ಕೆಲಸ ಮಾಡಿ ಹಣ್ಣಾಗಬೇಕು?” ಎಂದು ಮಗನ ಪರ ವಹಿಸಿ ಮಾತನಾಡುತ್ತಿದ್ದಳು.



ತಾಯಿಯ ಮಮತೆಯಿಂದಾಗಿ ತಿಮ್ಮಯ್ಯ ಸುಖವಾಗಿಯೇ ಬೆಳೆದ. ದುಡಿಯುವ ಅಗತ್ಯವೂ ಇರಲಿಲ್ಲ. ಅದರ ಮಹತ್ವವೂ ಗೊತ್ತಾಗಲಿಲ್ಲ. ಸಂಪತ್ತು ಹೇರಳ ಇರುವಾಗ ವಿದ್ಯೆ ಕಲಿತು ಆಗಬೇಕಾದದ್ದೇನಿದೆ ಎಂದು ಅದಕ್ಕೂ ಮುಂದಾಗಲಿಲ್ಲ. ಅವನ ವಯಸ್ಸಿನ ಸಾಕಷ್ಟು ಗೆಳೆಯರನ್ನು ಹೊಂದಿಸಿಕೊಂಡ. ಅವರೂ ಅವನ ಹಾಗೆ ಉಂಡಾಡಿಯಾಗಿ ತಿರುಗುತ್ತಿದ್ದವರೇ. ಅಪ್ಪ ಜೋಪಾನ ಮಾಡಿಟ್ಟ ಸಂಪತ್ತನ್ನು ಗೆಳೆಯರ ಜೊತೆಗೂಡಿ ನೀರಿನಂತೆ ಮುಗಿಸಿದ. ಅವನಿಗೆ ತಂದೆ ಹೇಳಿದ ಬುದ್ಧಿ ಮಾತುಗಳು ಪಥ್ಯವಾಗಲಿಲ್ಲ.

ವೃದ್ಧನಾದ ಹೊನ್ನಯ್ಯ ಮಗ ತನ್ನಂತೆ ಭೂಮಿಯನ್ನು ಪ್ರೀತಿಸುತ್ತಿಲ್ಲ ಎಂಬ ವ್ಯಥೆಯಿಂದ ಸವೆದ. ಒಂದು ದಿನ ಹೊಲದಲ್ಲಿ ಕೆಲಸ ಮಾಡುವಾಗಲೇ ಕುಸಿದು ಬಿದ್ದು ಅಸು ನೀಗಿದ. ಅದರಿಂದ ತಿಮ್ಮಯ್ಯನಿಗೆ ದುಃಖವಾಗಲಿಲ್ಲ. ಮಾತು ಮಾತಿಗೂ ಅಪ್ಪ ತನಗೆ ಬುದ್ಧಿ ಹೇಳುವ ನೆಪದಲ್ಲಿ ತನ್ನ ತಲೆ ತಿನ್ನುತ್ತಿದ್ದರೆಂದೇ ಅವನಿಗೆ ಅನಿಸುತ್ತಿತ್ತು. ಗೆಳೆಯರೊಡನೆ ಸೇರಿಕೊಂಡು ಮೋಜು ಮಾಡಿದ. ಮನೆಯಲ್ಲಿದ್ದ ಹಣ ಖಾಲಿಯಾದ ಮೇಲೆ ಒಡವೆಗಳನ್ನು ಮುಗಿಸಿದ. ಪಾತ್ರೆಗಳು, ಜಾನುವಾರುಗಳು ಮಾರಾಟವಾದವು. ಇದನ್ನು ತಡೆಯಲು ಬಂದ ತಾಯಿಯನ್ನು ಮನೆಬಿಟ್ಟು ಓಡಿಸಿದ. ಎಲ್ಲ ಮುಗಿದ ಮೇಲೆ ಗೆಳೆಯರಾದರೂ ಅವನೊಂದಿಗೆ ಯಾಕೆ ಇರುತ್ತಾರೆ? ಒಬ್ಬೊಬ್ಬರಾಗಿ ಅವನ ಸಂಗ ತೊರೆದು ಹೊರಟು ಹೋದರು. ಈಗ ಅವನಿಗೆ ನಿಜಕ್ಕೂ ಪಶ್ಚಾತಾಪವಾಯಿತು. ತಂದೆ ತನ್ನ ಹಿತಕ್ಕಾಗಿ ಹೇಳುತ್ತಿದ್ದ ಮಾತುಗಳಿಗೆ ಕಿವಿಗೊಡದೆ ಇಂಥ ದುಃಸ್ಥಿತಿ ಬಂದಿತೆಂದು ತಿಳಿದುಕೊಂಡ.

ದುಡಿಯಲು ತಿಮ್ಮಯ್ಯನಿಗೆ ತಿಳಿಯದ ಕಾರಣ ಅನ್ನಕ್ಕೂ ಪರದಾಡುವ ಸ್ಥಿತಿ ಬಂತು. ತಂದೆ ತನಗಾಗಿ ಏನನ್ನಾದರೂ ಉಳಿಸಿರಬಹುದೆಂದು ಮನೆಯಲ್ಲಿಡೀ ಹುಡುಕಿದ. ಏನೂ ಸಿಗಲಿಲ್ಲ. ಅಕ್ಷರ ಅರಿಯದ ಹೊನ್ನಯ್ಯ ಏನೂ ಬರೆದಿಡಲಿಕ್ಕೆ ಸಾಧ್ಯವಿರಲಿಲ್ಲ. ಹೀಗಿರುವಾಗ ಆ ಮನೆಯ ದೂರದ ಸಂಬಂಧಿಯೊಬ್ಬ ಆಗಮಿಸಿದ. ಹೊನ್ನಯ್ಯನ ಕಾಲದಲ್ಲಿ ವೈಭವದಿಂದ ಮೆರೆದಿದ್ದ ಮನೆ ಇಂದು ಬಿಕೋ ಎನ್ನುತ್ತಿತ್ತು. ಹೊನ್ನಯ್ಯ ಎಚ್ಚರಿಕೆಯ ಮನುಷ್ಯ. ಹೀಗಾಗುತ್ತದೆಯೆಂದು ಮೊದಲೇ ಊಹಿಸಿ ಏನಾದರೂ ವ್ಯವಸ್ಥೆ ಮಾಡಿರಬಹುದೆಂದು ಅವನಿಗನಿಸಿತು. ಅವನೂ ರೈತನೇ. ಆದುದರಿಂದ ವಿದ್ಯೆಯಿಲ್ಲದ ರೈತರು ಸುಣ್ಣದ ಬೊಟ್ಟಿಟ್ಟು ಏನನ್ನಾದರೂ ಬರೆಯುವ ವಿಷಯ ಬಲ್ಲ. ಅವನು ಮನೆಯಲ್ಲಿ ಹುಡುಕಿದಾಗ ಹೊನ್ನಯ್ಯ ಅದೇ ಭಾಷೆಯಲ್ಲಿ ಬರೆದ ಬರಹ ಕಾಣಿಸಿತು. ‘ಕೊಟ್ಟದ್ದನ್ನು ಕೇಳಬೇಡ ಇಟ್ಟದ್ದನ್ನು ತೆಗೆಯಬೇಡ. ಬದುಕಬೇಕೆನಿಸಿದರೆ ಕಲ್ಪವೃಕ್ಷಕ್ಕೆ ನೇಣು ಹಾಕಿಕೋ’ ಎಂದು ಅವನು ಸುಣ್ಣದ ಬೊಟ್ಟಿಟ್ಟಿದ್ದ.

ಸಂಬಂಧಿ ಇದರ ಅರ್ಥ ವಿವರಿಸಿದಾಗ ತಿಮ್ಮಯ್ಯ ತಲೆ ತಗ್ಗಿಸಿ, ಅಪ್ಪನಿಗೆ ನನ್ನಲ್ಲಿ ಪ್ರೀತಿಯಿರಲಿಲ್ಲ.ಅದಕ್ಕೇ ಹೀಗೆ ಬರೆದಿದ್ದಾರೆ’ ಎಂದು ಹೇಳಿದ. ಆದರೆ ಸಂಬಂಧಿ ಅದರರ್ಥ ಹೇಳಿದ. ಕೊಟ್ಟದ್ದು ಕೇಳಬೇಡ ಎಂದರೆ ಕೊಟ್ಟ ಸಾಲವಲ್ಲ. ಬೇರೆಯವರು ಕೊಡುವ ಕೆಟ್ಟ ಸಲಹೆ. ಇಟ್ಟದ್ದು ತೆಗೆಯಬೇಡವಂದರೆ ನಿನ್ನ ಹಿತ ಕಾಯಲು ತಾಯಿಯನ್ನು ನಿನ್ನೊಂದಿಗೆ ಉಳಿಸಿದ್ದೇನೆ. ಅವಳನ್ನು ಮನೆಯಿಂದ ಹೊರಗೆ ಹಾಕಬೇಡ ಅಂತ. ಇನ್ನು ಹೊಲದ ಬಳಿ ಸತ್ತ ತೆಂಗಿನಮರವಿದ್ದರೆ ಒಂದು ಹಗ್ಗದೊಂದಿಗೆ ಅದನ್ನೊಮ್ಮೆ ಹತ್ತಿ ನೋಡು’ ಎಂದು ಹಗ್ಗ ತಂದುಕೊಟ್ಟ. ತಿಮ್ಮಯ್ಯ ಹಗ್ಗದೊಂದಿಗೆ ಮರದ ಮೇಲೆ ಕಾಲಿಡುತ್ತಲೇ ಅದು ಮುರಿದಬಿತ್ತು. ಅದರೊಳಗೆ ಹೊನ್ನಯ್ಯ ಸಂಗ್ರಹಿಸಿಟ್ಟಿದ್ದ ಅಪಾರ ಧನರಾಶಿ ನೆಲಕ್ಕೆ ಸುರಿಯಿತು. ಅದನ್ನು ನೋಡಿ ತಿಮ್ಮಯ್ಯನ ಕಣ್ಣು ಹನಿಗೂಡಿತು. ‘ ಅಪ್ಪ ಎಷ್ಟು ಒಳ್ಳೆಯವರು. ಇಂದಿನಿಂದಲೇ ನಾನು ಒಳ್ಳೆಯ ಮನುಷ್ಯನಾಗಿ ದುಡಿದು ಬದುಕುತ್ತೇನೆ’ ಎಂದು ಹೇಳಿದ. ತಾಯಿಯ ಕ್ಷಮೆ ಕೋರಿ ಅವಳನ್ನು ಮನೆಗೆ ಕರೆತಂದ. ದುಷ್ಟ ಗೆಳೆಯರನ್ನು ದೂರವಿಟ್ಟು ಚೆನ್ನಾಗಿ ಬದುಕಿದ.

–ಪ. ರಾಮಕೃಷ್ಣ ಶಾಸ್ತ್ರಿ

# ಮಳೆ ನೀರು ಕೊಯ್ಲು





ಶ್ರೀಮತಿ ರೆನಿಟಾ
ಅನಿತಾ ಲೂವಿಸ್

ಮಳೆ ನೀರು ಕೊಯ್ಲು ಎಂಬುದು ಮಳೆನೀರನ್ನು ಒಟ್ಟುಗೂಡಿಸುವ, ಅಥವಾ ಸಂಚಯನ ಮಾಡುವ ಮತ್ತು ಶೇಖರಿಸಿಟ್ಟುಕೊಳ್ಳುವ ವಿಧಾನವನ್ನು ಮಳೆ ನೀರು ಕೊಯ್ಲು ಎಂದು ಕರೆಯುತ್ತಾರೆ. ಕುಡಿಯುವ ನೀರನ್ನು ಒದಗಿಸಲು, ಜಾನುವಾರುಗಳಿಗೆ ನೀರುಣಿಸಲು, ನೀರಾವರಿಗಾಗಿ ನೀರಿನ ವ್ಯವಸ್ಥೆ ಮಾಡಲು ಅಥವಾ ಅಂತರ್ಜಲ ಪುನರ್ಭರ್ತಿಕಾರ್ಯ ಎಂದು ಕರೆಯಲಾಗುವ ಪ್ರಕ್ರಿಯೆಯೊಂದರಲ್ಲಿ ನೀರುಪೊಟರೆಯನ್ನು ಪುನಃ ತುಂಬಿಸಲು ಮಳೆನೀರು ಕೊಯ್ಲು ಪದ್ಧತಿಯನ್ನು ಬಳಸಿಕೊಂಡು ಬರಲಾಗಿದೆ. ನೆಲದ ಸಂಗ್ರಹಣೆಗಳ ವ್ಯವಸ್ಥೆಗಳು ನೀರನ್ನು ಒಂದು ಸಿದ್ದಪಡಿಸಲಾದ ಸಂಗ್ರಹಣಾ ಪ್ರದೇಶದಿಂದ ಶೇಕರಣಾ ಪ್ರದೇಶಕ್ಕೆ ಹರಿಸುತ್ತವೆ ಅಥವಾ ನಿರ್ದೇಶಿಸುತ್ತದೆ. ಮಳೆಯ ನೀರಿನ ಅತ್ಯಂತ ಕೊರತೆಯಿರುವ ಮತ್ತು ಇತರ ಜಲಮೂಲಗಳು ಲಭ್ಯವಿಲ್ಲದಿರುವ ಪ್ರದೇಶಗಳಲ್ಲಿ ಮಾತ್ರವೇ ಸಾಮಾನ್ಯವಾಗಿ ಅದನ್ನು ಪರಿಗಣಿಸಲಾಗುತ್ತದೆ. ಪ್ರತ್ಯೇಕ ಕುಟುಂಬಗಳಿಗಿಂತ ಹೆಚ್ಚಾಗಿ ಸಣ್ಣ ಸಮುದಾಯಗಳಿಗೆ ಅವು ಹೆಚ್ಚು ಸೂಕ್ತವಾಗಿರುತ್ತದೆ. ನೆಲದ ಜಲಸಂಗ್ರಹಣಾ ವ್ಯವಸ್ಥೆಗಳನ್ನು ಸೂಕ್ತವಾಗಿ ವಿನ್ಯಾಸಗೊಳಿಸಿದ್ದೇ ಆದಲ್ಲಿ, ಅವು ಬ್ರಹತ್ ಪ್ರಮಾಣದಲ್ಲಿ ಮಳೆನೀರನ್ನು ಸಂಗ್ರಹಿಸಬಲ್ಲವಾಗಿರುತ್ತವೆ. ಛಾವಣಿಯೊಂದರ ಮೇಲೆ ಬೀಳುವ ಮಳೆನೀರನ್ನು ಸೂರುದೋಣಿಗಳು ಮತ್ತು ಕೊಳಾಯಿಗಳ ಒಂದು ವ್ಯವಸ್ಥೆಯ ಮೂಲಕ ಶೇಖರಣಾ ವ್ಯವಸ್ಥೆಯೊಳಗೆ ಬೀಳುವಂತೆ ಛಾವಣಿಯ ಸಂಗ್ರಹಣಾ ವ್ಯವಸ್ಥೆಗಳು ನಿರ್ದೇಶಿಸುತ್ತವೆ. ಬೇಸಿಗೆ ಕಾಲವೊಂದರ ನಂತರದ ಮಳೆನೀರಿನ ಮೊದಲ ರಭಸವನ್ನು ಹಾಗೆಯೇ ಹರಿದುಹೋಗಲು ಬಿಡಬೇಕು. ಏಕೆಂದರೆ ಧೂಳು, ಕಸಕಡ್ಡಿಗಳು, ತ್ಯಾಜ್ಯವಸ್ತುಗಳು ಇತ್ಯಾದಿಗಳಿಂದ ಅದು ಮಲಿನ ಗೊಂಡಿರುತ್ತದೆ. ನೀರು ನಿಲ್ಲುವುದನ್ನು ತಡೆಗಟ್ಟುವುದಕ್ಕಾಗಿ ಛಾವಣಿ ಸೂರುದೋಣಿಗಳು ಸಾಕಸ್ಟು ವಾಲಿಕೊಂಡಿರುವುದು ಅತ್ಯಗತ್ಯವಾಗಿರುತ್ತದೆ.

ಸೊಳ್ಳೆಗಳ ಸಂತಾನೋತ್ಪತ್ತಿಯನ್ನು ತಡೆಗಟ್ಟಲು ಹಾಗೂ ಅವಿಯಾಗುವಿಕೆಯ ನಷ್ಟಗಳು ಅಶುದ್ಧವಾಗುವಿಕೆ ಮತ್ತು ಪಾಚಿಯ ಬೆಳವಣಿಗೆಯನ್ನು ತಗ್ಗಿಸಲು ಶೇಖರಣಾ ತೊಟ್ಟಿಗಳನ್ನು ಮುಚ್ಚಿರುವುದು ಅತ್ಯಗತ್ಯವಾಗಿರುತ್ತದೆ. ಮಳೆನೀರು ಕೊಯ್ಲು ವ್ಯವಸ್ಥೆಯನ್ನು ನಿರ್ಮಲವಾಗಿ ಹಾಗೂ ಉತ್ತಮ ಕಾರ್ಯನಿರ್ವಹಣಾ ಸ್ಥಿತಿಯಲ್ಲಿ ಇಟ್ಟುಕೊಳ್ಳಲು ಅವುಗಳ ಕ್ರಮಬದ್ಧವಾದ ನಿರ್ವಹಣೆ ಹಾಗೂ ಶುದ್ಧೀಕರಣ ಕಾರ್ಯವು ಅಗತ್ಯವಾಗಿರುತ್ತದೆ.

ನಗರ ಪ್ರದೇಶದಲ್ಲಿನ ಮಳೆನೀರು ಕೊಯ್ಲು ಪ್ರಕ್ರಿಯೆಯು ಬಗೆಬಗೆಯ ಕಾರಣಗಳನ್ನು ಹೊಂದಲು ಸಾಧ್ಯವಿದೆ. ನಗರದ ಅಗತ್ಯತೆಗಳಿಗಾಗಿ ಪೂರಕವಾದ ನೀರನ್ನು ಒದಗಿಸಲು ಆ ನಗರ ಪ್ರದೇಶದ ಗಿಡ–ಮರಗಳಿಗಾಗಿ ಮಣ್ಣಿನ ತೇವಾಂಶದ ಮಟ್ಟವನ್ನು ಹೆಚ್ಚಿಸಲು ಕೃತಕ ಮರುಭರ್ತಿ ವಿಧಾನದ ಮೂಲಕ ಅಂತರ್ಜಲದ ಗುಣಮಟ್ಟವನ್ನು ಸುಧಾರಿಸಲು ನಗರಗಳಲ್ಲಿ ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಒಂದು ಅಗತ್ಯ ಕ್ರಮವಾಗಿ ಕಂಡುಬರುತ್ತದೆ.

ಬೇಸಿಗೆ ಕಾಲದಾದ್ಯಂತ ಕಂಡುಬರುವ ನೀರು ಬೇಡಿಕೆಯನ್ನು ಪೂರೈಸಲು ಅನುವಾಗುವಂತ ವ್ಯವಸ್ಥೆಯ ಗಾತ್ರವನ್ನು ನಿರ್ಧರಿಸುವುದು ಅಥವಾ ವಿಂಗಡಿಸುವುದು ಅತಿಮುಖ್ಯ ವಿಷಯವಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ ಬೇಸಿಗೆ ಕಾಲದಾದ್ಯಂತ ಕಂಡುಬರುವ ನೀರಿನ ದೈನಂದಿನ ಅವಶ್ಯಕತೆಯನ್ನು ಪೂರೈಸಲು ಸಾಕಾಗುವಷ್ಟು ಸಂಗ್ರಹಣಾ ತೊಟ್ಟಿಯ ಗಾತ್ರವಿರಬೇಕು. ಇದರ ಜೊತೆಗೆ ಸಂಗ್ರಹಣಾ ಪ್ರದೇಶ ಅಥವಾ ಛಾವಣಿಯ ಗಾತ್ರವು ತೊಟ್ಟಿಯನ್ನು ತುಂಬಿಸಬಲ್ಲಷ್ಟು ದೊಡ್ಡದಾಗಿರಬೇಕು. ●



# ಶಿಕ್ಷಣ 'ಒಂದು ಓರೆ ನೋಟ'!



ಟಿ. ನಾಗೇಂದ್ರರಾವ್
ಕಾರ್ಯಕ್ರಮ ಸಂಯೋಜಕರು,
ಧರ್ಮಜ್ಯೋತಿ

**ಶಿಕ್ಷಣವೆಂದರೆ** ಓದು–ಬರಹ, ಲೆಕ್ಕ, ಇವಿಷ್ಟೇ ಶಿಕ್ಷಣ ಎಂಬ ಮನೋಭಾವನೆಯಲ್ಲಿಯೇ ನಾವಿದ್ದೇವೆ. ಓದು, ಬರಹ, ಲೆಕ್ಕ ಇವುಗಳ ಜೊತೆಗೆ ಬದುಕಿನ ಕೌಶಲ್ಯಗಳೂ ಸೇರಿಕೊಂಡಿವೆ ಎಂಬುವುದನ್ನು ನಾವು ಮರೆಯಬಾರದು. ಬದುಕಿನ ಕೌಶಲ್ಯವನ್ನು ಯಾವ ಶಿಕ್ಷಣ ಮರೆಯುತ್ತದೆಯೋ ಕಡೆಗಣಿಸುತ್ತದೆಯೋ ಅಂತಹ ಶಿಕ್ಷಣ ಬದುಕಿಗೆ ಶಾಪವಾಗುತ್ತದೆಯೇ ಹೊರತು ವರವಾಗಿ ಪರಿಣಮಿಸುವುದಿಲ್ಲ ಎಂಬ ಸತ್ಯವನ್ನು ನಾವು ತಿಳಿದುಕೊಳ್ಳಬೇಕು. ನಯ–ವಿನಯ, ಸೌಜನ್ಯ, ಸಹಕಾರ, ಪ್ರೀತಿ–ವಿಶ್ವಾಸ, ಪರಸ್ಪರ ಹೊಂದಾಣಿಕೆ, ಸೇವಾ ಮನೋಭಾವನೆ ಇತ್ಯಾದಿ ಮೌಲ್ಯಗಳನ್ನು ಅಂದರೆ ಜೀವನ ಶಿಕ್ಷಣವನ್ನು ಅಳವಡಿಸಿಕೊಳ್ಳದ ಶಿಕ್ಷಣ ಶಿಕ್ಷಣವೇ ಅಲ್ಲ!

ಇಂದು ನಾವು ಎದುರಿಸುತ್ತಿರುವ ನಿರುದ್ಯೋಗ ಸಮಸ್ಯೆಗೆ ಮೂಲಕಾರಣ ಬದುಕಿನ ಕೌಶಲ್ಯಗಳಿಗೆ ಆದ್ಯತೆ ಕೊಡದೇ ಇರುವುದರ ಪರಿಣಾಮವೆಂದೇ ಹೇಳಬೇಕು. ಸಾಮಾನ್ಯವಾಗಿ ನಮ್ಮ ವಿದ್ಯಾವಂತರ ಮನಸ್ಸು ಏನು? ತಾವು ವಿದ್ಯಾವಂತರು, ತಮಗೆ ನೌಕರಿಬೇಕು ಎನ್ನುವುದು. ನೌಕರಿಗಾಗಿಯೇ ಶಿಕ್ಷಣವೆಂದಾದರೆ ಅದು ಶಿಕ್ಷಣದ ವೈಫಲ್ಯವೇ ಆಗುತ್ತದೆ. ವಿದ್ಯಾವಂತರೆಂದರೆ ನೌಕರಿ ಮಾಡುವವರು ಎಂದಷ್ಟೇ ಅರ್ಥವಲ್ಲ. ಹಾಗೆ ಅರ್ಥ ಗ್ರಹಿಸಲೂಬಾರದು. ತಮ್ಮ ಬದುಕನ್ನು ತಾವು ಸ್ವತಂತ್ರವಾಗಿ ರೂಪಿಸಿಕೊಳ್ಳಲು ಸಮರ್ಥರಾಗುವವರೇ ನಿಜವಾದ ವಿದ್ಯಾವಂತರು. ಶಿಕ್ಷಣವು ಪ್ರತಿಯೊಬ್ಬರಲ್ಲೂ ಆ ಸಾಮರ್ಥ್ಯವನ್ನು ತುಂಬಬೇಕು.

ಬದುಕಿನ ಕೌಶಲ್ಯವೆಂದರೆ ಎಲ್ಲ ಬಗೆಯ ವೃತ್ತಿ ಮತ್ತು ಪ್ರವೃತ್ತಿಗಳು, ಶಿಕ್ಷಣದ ಮೂಲಕ ಪ್ರತಿಯೊಬ್ಬರೂ ಇಂಥಹ ವೃತ್ತಿ ಮತ್ತು ಪ್ರವೃತ್ತಿ ಕೌಶಲ್ಯಗಳು ಬೆಳೆಯಬೇಕು. ಆದರೆ ಅದಾಗುತ್ತಾ ಇಲ್ಲ. ಇಂದು ವಿವಿಧ ಕಸಬುಗಳಲ್ಲಿ ಕೆಲಸ ಮಾಡುವವರು ಕಂಡುಬರುತ್ತಿಲ್ಲ. ಶ್ರಮಜೀವನ ಶಿಕ್ಷಣದ ಭಾಗವಾಗಿ ಬರುತ್ತಿಲ್ಲ. ಕೃಷಿಕಾರ್ಯ ಮಾಡುವ ಜನರಿಲ್ಲ. ತರಕಾರಿ ಬೆಳೆಯುವವರಿಲ್ಲ. ಮರ ಹತ್ತುವವರಿಲ್ಲ. ಅನೇಕ ಉಪಕಸುಬುಗಳೆಲ್ಲ ಬಿಕೋ ಅನ್ನುತ್ತಿವೆ. ಜೀವನೋಪಯೋಗಿ ಕಸಬುಗಳನ್ನು ಕಳೆದುಕೊಂಡ ನಾವು ಬದುಕಲು ಸಾಧ್ಯವೇ?

ಈಗ ಹೊಸ ಶಿಕ್ಷಣ ನೀತಿಯ ಪ್ರಕಾರ ಮಕ್ಕಳ ಇನ್ನಿತರ ಪ್ರತಿಭಾ ಚಟುವಟಿಕೆಗಳನ್ನು ಶಿಕ್ಷಣದ ಬಾಬಿಗೆ ಸೇರಿಸಲಾಗುತ್ತಿದೆ. ಇದು ಒಳ್ಳೆಯದೆ, ಆದರೆ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಶಿಕ್ಷಣ ಮುಗಿಸಿ ಪ್ರೌಢಶಾಲೆಗೆ

ಕಾಲಿಡುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಯಾವ ಭಾಷೆಯಲ್ಲಿಯೂ ಒಂದು ವಾಕ್ಯ ರಚಿಸಲು ಬರುವುದಿಲ್ಲ. ಅಂದರೆ ಶಿಕ್ಷಣದ ಮಟ್ಟ ಏನು? ವಿವಿಧ ಸೌಲಭ್ಯಗಳು ಇರಲಿ. ಆದರೆ ಮಕ್ಕಳಿಗೆ ಸರಿಯಾಗಿ ಕಲಿಸಲು ಶಿಕ್ಷಕರನ್ನು ತೊಡಗಿಸಲಿ, ಇಲ್ಲದಿದ್ದರೆ ಆರೋಗ್ಯವಂತ ಪ್ರಜೆಗಳು ನಿರ್ಮಾಣಗೊಳ್ಳಲಾರರು.

ಇಂದು ದೇಶದೆಲ್ಲೆಡೆ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ನೇರಾ ನೇರಾ ಪದವಿಗಳನ್ನು ಮಾಡದೇ ಪ್ರೌಢ ಶಾಲೆ ಪದವಿಪೂರ್ವ ಶಿಕ್ಷಣದ ಹಂತದಲ್ಲಿಯೇ ಕರಕುಶಲ ತರಬೇತಿಯನ್ನು. ಅಳವಡಿಸಿಕೊಳ್ಳಬೇಕು. ಅದರೊಂದಿಗೆ ಪದವಿಯನ್ನೋ, ಮತ್ತೇನ್ನನ್ನೋ ಆಯ್ಕೆಮಾಡಿಕೊಳ್ಳುವ ಅವಕಾಶ ಇರಬೇಕು. ತಾಂತ್ರಿಕ ತರಬೇತಿಗಳಿಗೆ ಪ್ರೋತ್ಸಾಹವಿರಬೇಕು. ಪಡೆದ ಶಿಕ್ಷಣ ಬದುಕಿಗೆ ಪೂರಕವಾಗಿರಬೇಕು. ಮಕ್ಕಳ ಆಸಕ್ತಿಗೆ ಅವಕಾಶ ಇರಬೇಕು. ಮಕ್ಕಳ ಮೇಲೆ ಒತ್ತಡ ಹೇರಬಾರದು. ಏನೋ ಆಗಬೇಕಾದವರು ಇನ್ನೇನೋ ಆಗುತ್ತಾರೆ. ಮಕ್ಕಳ ಸಹಜವಾದ ಆಸಕ್ತಿ, ಸಾಮರ್ಥ್ಯ ಫಲಪ್ರದವಾಗದೆ ಜೀವನದಲ್ಲಿ ಸೋಲಬಹುದು.

ಕೌಶಲ, ಪ್ರತಿಭೆ ವೈವಿದ್ಯಮಯವಾಗಬಹುದು. ಒಂದೊಂದು ಮಗುವಿನಲ್ಲಿ, ಒಂದೊಂದು ವಿಧದ ಕೌಶಲ, ಪ್ರತಿಭೆ ಹುದುಗಿರುತ್ತದೆ. ಅವರಲ್ಲಿರುವ ಆ ಕೌಶಲವನ್ನು, ಪ್ರತಿಭೆಯನ್ನು ಗುರುತಿಸಿ ಅದು ಅವರಲ್ಲಿ ವಿಕಾಸಗೊಳ್ಳುವಂತೆ ಅವಕಾಶ ಕಲ್ಪಿಸಿ ಪ್ರೋತ್ಸಾಹಿಸಿದರೆ ಆ ಮಕ್ಕಳು ಮುಂದೆ ಆ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಬಹುದು. ಸಮಾಜಕ್ಕೆ ಬೇಕಾದ, ಸಮಾಜ ಪ್ರೀತಿಸುವಂತಹ ವ್ಯಕ್ತಿಗಳಾಗಿ ಕೀರ್ತಿ ಪಡೆಯಬಹುದು.

ಆದುದರಿಂದ ನಮ್ಮ ಹೆತ್ತವರು ತಮ್ಮ ಮಕ್ಕಳ ಭವಿಷ್ಯವನ್ನು ತಮಗೆ ಬೇಕಾದಂತೆ ನಿರ್ಧರಿಸಲು ಹೋಗಬಾರದು. ಅವರ ಆಸಕ್ತಿ- ಅಭಿರುಚಿಗಳನ್ನು ಗುರುತಿಸಿ ಅವರಿಗೆ ಯಾವುದರಲ್ಲಿ ಆಸಕ್ತಿ ಇದೆ, ಆ ಕ್ಷೇತ್ರದಲ್ಲಿ ಬೆಳೆಯಲು ಅವಕಾಶ ಒದಗಿಸಬೇಕು. ಮಕ್ಕಳ ಪ್ರತಿಭೆ, ಸಾಮರ್ಥ್ಯ-ವಿಕಾಸಗೊಳ್ಳಲು ಹೆತ್ತವರ ನಿರಂತರ ಪ್ರೋತ್ಸಾಹ ಅಗತ್ಯ.

ಇಂದಿನ ಆಧುನಿಕ ತಂತ್ರಜ್ಞಾನ, ಗಣಕಯಂತ್ರ, ಅಂತರ್ಜಾಲ, ಮೊಬೈಲ್, ದೂರದರ್ಶನ, ಇತ್ತೀಚಿನ ಸ್ಮಾರ್ಟ್‌ಫೋನ್ ಇತ್ಯಾದಿ ಇತ್ಯಾದಿಗಳ ಜಾಲದಲ್ಲಿ ನಮ್ಮ ಮಕ್ಕಳು ಸಿಕ್ಕಿಹಾಕಿಕೊಂಡಿದ್ದಾರೆ. ನಮ್ಮ ಮಕ್ಕಳು ಬುದ್ದಿವಂತರು. ಚುರುಕುಮತಿಯುಳ್ಳವರು. ಹೌದು ಡಾಕ್ಟರ್ ಸರ್ವಪಲ್ಲಿ ರಾಧಾಕೃಷ್ಣರವರು ಹೇಳಿದಂತೆ; ನಮ್ಮ ಮಕ್ಕಳ ಆಲೋಚನೆ ನಮಗಿಂತಲೂ ಮುಂದೆ ಇರುತ್ತದೆ. ಅದು ಸಕಾರಾತ್ಮಕವಾಗಿರುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ, ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಸರಕಾರದ ಯೋಜನೆಗಳು ಸ್ತುತ್ಯರ್ಹ್ಯವಾಗಿವೆ. ಇವು ನಮ್ಮ ಶಿಕ್ಷಕರಿಗೆ ಹೊರೆಯಾಗಬಾರದು.

ಮಕ್ಕಳು ತಮ್ಮ ಪ್ರತಿಭೆ- ಸಾಮರ್ಥ್ಯವನ್ನು ಕಲಿಕೆಗಾಗಿ ಸದುಪಯೋಗಪಡಿಸಿಕೊಳ್ಳಬೇಕಾಗಿದೆ. ಮನೆಯಲ್ಲಿಯೂ- ಶಾಲೆಯಲ್ಲಿಯೂ ಸೂಕ್ತ ವಾತಾವರಣ ಇರಬೇಕಾಗಿರುವುದು ಅತೀ ಮುಖ್ಯ. ಇತ್ತಿತ್ತಲಾಗಿ ವಿದ್ಯಾರ್ಥಿಗಳಲ್ಲಿ ಕಲಿಯುವ ಜವಾಬ್ದಾರಿ ಕಡಿಮೆಯಾಗುತ್ತಾ ಇದೆ. ಅನೇಕ ವಿದ್ಯಾರ್ಥಿಗಳಿಗೆ ಮನೆಯಲ್ಲಾಗಲಿ, ಶಾಲೆಯಲ್ಲಾಗಲಿ ಹಿಡಿತ ಇದ್ದ ಹಾಗೆ ಕಾಣುವುದಿಲ್ಲ. ಒಂದಲ್ಲ ಒಂದು ದುಶ್ಚಟವನ್ನು ಅಂಟಿಸಿಕೊಂಡ ಹಾಗೆ ಕಂಡುಬರುತ್ತಿದೆ. ಇತ್ತೀಚಿಗಂತೂ ಮಾದಕದ್ರವ್ಯ ವ್ಯಸನಿಗಳಾಗುತ್ತಿರುವ ಬಗ್ಗೆ ಕಳವಳ ಉಂಟಾಗುತ್ತಿದೆ. ಕಲಿಯುವ ಸಮಯದಲ್ಲಿ ಮಕ್ಕಳು ಕಲಿಯಬೇಕು. ಅಡ್ಡದಾರಿ ಹಿಡಿಯಬಾರದು. ಇಂತಹ ಸಮಯದಲ್ಲಿ ಶಿಕ್ಷಣ ಸಂಸ್ಥೆಗಳ ಪಾಲಕರ ಜವಾಬ್ದಾರಿ ಹೆಚ್ಚಿದೆ. ಈ ದಿಶೆಯಲ್ಲಿ ಸಮಾಜದ ಜಾಗ್ರತೆಯು ಅಗತ್ಯ.

ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಪುನರ್‌ರೂಪಿಸುವ ಅಗತ್ಯವಿದೆ. ಜೀವನಾವಶ್ಯಕ ವೃತ್ತಿ ಕಸಬುಗಳನ್ನು ಪ್ರೌಢಶಾಲಾ ಹಂತದಿಂದಲೇ ಶಿಕ್ಷಣದಲ್ಲಿ ಅಳವಡಿಸಬೇಕು. ಅವುಗಳೂ ಕೂಡಾ ಪಠ್ಯವಿಷಯವಾಗಬೇಕು. ಪ್ರಾಯೋಗಿಕವಾಗಿ ಮಕ್ಕಳಿಗೆ ಅವುಗಳ ಜ್ಞಾನ ಸಿಗಬೇಕು. ದುಡಿಮೆಯ ಮಹತ್ವವನ್ನು ಮತ್ತು ಅದರ ಅಗತ್ಯವನ್ನು ನಮ್ಮ ಮಕ್ಕಳು ತಿಳಿದುಕೊಳ್ಳುವಂತಾಗಬೇಕು. ಆವಾಗಲೇ ಅವರು ನೌಕರಿಯ ಹೊರತಾಗಿಯೂ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಸಮರ್ಥರಾಗಬಹುದು. ಸಮಾಜಕ್ಕೆ ಸಂಪತ್ತಾಗಿ ಸಲ್ಲುವುದು ಕೂಡಾ ಆವಾಗಲೇ, ನಮ್ಮ ಶಿಕ್ಷಣ ವ್ಯವಸ್ಥೆ ಈ ಕುರಿತು ಆಲೋಚಿಸುವಂತಾಗಲಿ. ●

# ರಸಪ್ರಶ್ನೆಗಳು

1. ರಿಸರ್ವ್ ಬ್ಯಾಂಕಿನ ಪ್ರಥಮ ಭಾರತೀಯ ಪ್ರಥಮ ಗವರ್ನರ್ ಯಾರು?
2. ಆಧುನಿಕ ಒಲಿಂಪಿಕ್ಸ್‌ನ ಪಿತಾಮಹ ಯಾರು?
3. ವಿಶ್ವ ದೃಷ್ಟಿ ದಿನವನ್ನು ಯಾವಾಗ ಆಚರಿಸಲಾಗುವುದು?
4. ವಿಶ್ವದ ಮೊದಲ ಮಹಿಳಾ ಬ್ಯಾಂಕ್ ಸ್ಥಾಪಿಸಿದ ರಾಷ್ಟ್ರ ಯಾವುದು?
5. ಖಖಔ ಮಾನ್ಯತೆ ಪಡೆದ ಮೊದಲ ಬ್ಯಾಂಕ್ ಯಾವುದು?
6. ಸ್ವಾತಂತ್ರ ಭಾರತದ ಮೊಟ್ಟ ಮೊದಲ ಮತದಾರ ಯಾರು?
7. ರಿಸರ್ವ್ ಬ್ಯಾಂಕನ್ನು ಯಾವಾಗ ರಾಷ್ಟ್ರೀಕರಣಗೊಳಿಸಲಾಯಿತು?
8. ನೋಟುಗಳ ಮುದ್ರಣ ಕೇಂದ್ರ ಕಚೇರಿ ಎಲ್ಲಿದೆ?
9. ಚೆಕ್ ಸಿಸ್ಟಮ್ ಪರಿಚಯಿಸಿದ ಭಾರತದ ಮೊದಲ ಬ್ಯಾಂಕ್ ಯಾವುದು?
10. ಒಲಿಂಪಿಕ್ಸ್‌ನ ಒಟ್ಟು ಸದಸ್ಯ ರಾಷ್ಟ್ರಗಳು ಎಷ್ಟು?
11. 2000ರ ಆಸ್ಟ್ರೇಲಿಯದಲ್ಲಿ ಜರುಗಿದ 27ನೇ ಕ್ರೀಡಾ ಕೂಟದಲ್ಲಿ 69 ಕೆ.ಜಿ. ಭಾರ ಎತ್ತುವ ಸ್ಪರ್ದೆಯಲ್ಲಿ ಕಂಚಿನ ಪದಕ ಗೆದ್ದ ಮೊದಲ ಭಾರತದ ಮಹಿಳೆ ಯಾರು?
12. ಒಲಿಂಪಿಕ್ಸ್ ಕ್ರೀಡಾ ಕೂಟಗಳಲ್ಲಿ ಪದಕ ಜಯಿಸಿದ ಮೊದಲ ಭಾರತೀಯ ಯಾರು?
13. ಭಾರತ ರತ್ನ ಪ್ರಶಸ್ತಿ ಪಡೆದ ಅತಿ ಕಿರಿಯ ವ್ಯಕ್ತಿ ಯಾರು?
14. ಭಾರತದಲ್ಲಿ ಬಣ್ಣದ ದೂರದರ್ಶನ ಆರಂಭವಾದ ವರ್ಷ ಯಾವುದು?
15. ಭಾರತದಲ್ಲಿ ಅತಿ ಹೆಚ್ಚು ನೀರು ಬಳಸುವ ಕೈಗಾರಿಕೆ ಯಾವುದು?
16. ಭಾರತದ ಮೇಲೆ ಚೀನಾ 1962ರಲ್ಲಿ ದಾಳಿ ಮಾಡಿದಾಗ ಅಂದಿನ ರಕ್ಷಣಾ ಸಚಿವರು ಯಾರಗಿದ್ದರು?
17. ಸಾರ್ವತ್ರಿಕ ಚುನಾವಣೆಗಳಲ್ಲಿ ಎಲೆಕ್ಟ್ರಾನಿಕ್ ವೋಟಿಂಗ್ ಮೆಶಿನ್ ಬಳಸಿದ ಭಾರತದ ಮೊದಲ ರಾಜ್ಯ ಯಾವುದು?
18. ಮೃದೇಹವನ್ನು ಕೆಡದಂತೆ ಇರಿಸಲು ಬಳಸುವ ರಾಸಾಯನಿಕ ಯಾವುದು?
19. ವಿಹಾರ ಇದು ಯಾವ ಧರ್ಮದ ಪವಿತ್ರ ಸ್ಥಳ ಆಗಿದೆ?
20. ಭಾರತದಲ್ಲಿ ಕಡಿಮೆ ಅರಣ್ಯ ಪ್ರದೇಶ ಹೊಂದಿರುವ ರಾಜ್ಯ ಯಾವುದು?

1. ಸಿ.ಡಿ ದೇಶಮುಖ್ 2. ಬ್ಯಾರನ್ ಪಿಯರ ಡಿ ಕ್ಯುಬರತಿನ 3. ಅಕ್ಟೋಬರ್ 10 4. ಪಾಕಿಸ್ತಾನ 5. ಕೆನರಾ ಬ್ಯಾಂಕ್ 6. ಶ್ಯಾಮ ಶರಣ ನೇಗಿ 7. 1949 8. ಮಹಾರಾಷ್ಟ್ರದ ನಾಸಿಕ್ 9. ಬಂಗಾಲ ಬ್ಯಾಂಕ್ 10. 171 11. ಕರ್ಣಂಮಲ್ಲೇಶ್ವರಿ 12. ಕೆ.ಡಿ. ಜಾಧವ 13. ಸಚಿನ್ ತೆಂಡೂಲ್ಕರ್ 14. 1982 15. ಶಾಖೋತ್ಪನ್ನ ವಿದ್ಯುತ್ 16. ಕೃಷ್ಣಾ ಮೆನನ್ 17. ಕೇರಳ 18. ಫಾರ್ಮಲ್ಡಿಹಾಯ್ಡ್ (formaidehyde) 19. ಬೌದ್ಧ ಧರ್ಮ 20. ಹರಿಯಾಣ.

ಅನಿತ ಸುವಾರಿಸ್

# Hardwork through success



Bavitha

Hardwork is the real key to success. Keep your eyes on the goal and just keep taking next step to completing it. If you are not sure which way to do something take both the way and see which works better. There is no secret behind success. It is the result of preparation or hardwork and learning from failure. Don't stop the work when you are tired. Stop when you are done. Success is not always about grateness. It is about consistency. If you fail then never give up because F.A.I.L means First Attempt In Learning. End is not the end. Infact, E.N.D means Effort Never Dies. If you get no as an answer remember that N.O means next opportunity!

# Our environments



Hazmeena X 'A'

We heard the word 'environment' often being used on the television, in newspapers and by people around us. Our elders tell us that 'environment' is not what it used to be earlier; others say that we should work in a healthy 'environment' and global summits involving the development and developing countries are regularly held to discuss 'environment' issues. All organisms such as plants; animals, microorganisms and human beings as well as the physical surroundings interact with each other and maintain a balance in nature. All the interacting organisms in an area together with the non-living constituents of the environment form an ecosystem. An ecosystem consists of biotic components comprising living organisms.

# FATHER



G Ashura Muheeba
X 'A'

My father is my best friend and real hero of my life. He sacrifices everything for us even when he doesn't want to do. A father is always a teacher for his children and teaches us many values and always supports us even when we make mistakes. Happiness is when everybody says " you look like your father" this I the best line that the daughter always needed and in every letter of father there is powerful meaning.

F- for the friend that you are
A- An anchor I can rely on
T- A teacher I can learn from
H- A hero I can look up to
E- A constant source of encouragement &
R- A role model I'm proud of my father gave me the greatest gift anyone could give that he believed in me.



ಕು. ಅಶ್ವಿತಾ

# ಸೈಬರ್ ಅಪರಾಧಗಳು

ಸೈಬರ್ ಅಪರಾಧವೆಂದರೆ ಒಂದು ಅಪರಾಧವನ್ನು ಮಾಡಲು ಒಂದು ಗಣಕಯಂತ್ರ ಅಥವಾ ಅದರ ಜಾಲವನ್ನು ಒಂದು ಉಪಕರಣವನ್ನಾಗಿ ಬಳಸಿಕೊಂಡು ಅಥವಾ ಅಪರಾಧದ ಗುರಿಯನ್ನಾಗಿ ಆ ಉಪಕರಣಗಳನ್ನು ಉಪಯೋಗಿಸಿಕೊಂಡು ಮಾಡಿದಂತಹ ಅಪರಾಧ. ಅಂಕಿ ಅಂಶಗಳ ಕಳುವಿನ ಪ್ರಕರಣಗಳಲ್ಲಿ ಅನಧೀಕೃತ ಸಂಪರ್ಕ ಅಥವಾ ಒಂದು ಗಣಕಯಂತ್ರ ವ್ಯವಸ್ಥೆಗೆ ಮಾಡಿದಂತಹ ಹಾನಿಗಳಲ್ಲಿ ಸೈಬರ್ ಅಪರಾಧದ ಗುರಿಯು ಗಣಕಯಂತ್ರವೇ ಆಗಿರುತ್ತದೆ. ಗಣಕಯಂತ್ರಗಳನ್ನು ಮತ್ತು ಅಂತರ್ಜಾಲಗಳನ್ನು ಬಳಸಿಕೊಂಡು ಸಾಂಪ್ರದಾಯಿಕ ಅಪರಾಧವನ್ನು ಮಾಡಿದಂತಹ ಪ್ರಕರಣದಲ್ಲಿ ಗಣಕಯಂತ್ರ ಅಥವಾ ಅಂತರ್ಜಾಲವು ಅಪರಾಧವನ್ನು ಮಾಡಲು ಒಂದು ಉಪಕರಣವನ್ನಾಗಿ ಬಳಸಿಕೊಳ್ಳಲಾಗುತ್ತದೆ. ಈ ವರ್ಗದಲ್ಲಿ ಕ್ರೆಡಿಟ್ ಕಾರ್ಡ್ ವಂಚನೆಗಳು, ಮಾನಹಾನಿ, ಅಪರಾಧಿಕ ಭಯೋತ್ಪಾದನೆ ಮತ್ತು ಮೋಸತನ, ಸುಳ್ಳು ಪ್ರಾತಿನಿತ್ಯದಿಂದ ವಂಚನೆಗಳು ಬರುತ್ತವೆ. ಕೆಲವೊಂದು ಅಪರಾಧಗಳಲ್ಲಿ ಅಂದರೆ ಬಾಲ ಅಶ್ಲೀಲತೆ ಮುಂತಾದವುಗಳಲ್ಲಿ ಅಪರಾಧದ ಸಂಬಂಧ ಗಣಕಯಂತ್ರವು ಕೇವಲ ಪ್ರಾಸಂಗಿಕವಾಗಿರುತ್ತದೆ. ಇತರ ಬಗೆಯದಾದ ಸೈಬರ್ ಅಪರಾಧಗಳಾದ ತಂತ್ರಾಂಶ ನಕಲು, ಹಕ್ಕುಗಳ ಉಲ್ಲಂಘನೆ ಮತ್ತು ಶ್ರಾವ್ಯ ಮತ್ತು ದೃಶ್ಯ ಮಾಧ್ಯಮಗಳ ನಕಲುತನ ಮುಂತಾದ ಅಪರಾಧಗಳಲ್ಲಿ ಉಪಯೋಗಿಸಲಾದಂತಹ ಗಣಕಯಂತ್ರಗಳನ್ನು ಸಹಭಾಗಿತ್ವದ ಅರ್ಥದಲ್ಲಿ ಬಳಸಲಾಗುತ್ತದೆ.

ಬಹಳಷ್ಟು ಸೈಬರ್ ಅಪರಾಧಗಳಲ್ಲಿ ಸಾಂಪ್ರದಾಯಿಕ ಅಪರಾಧಗಳನ್ನು ಆನ್‌ಲೈನ್ ಮಾನಹಾನಿ, ಕೃತಕ ಪ್ರಾತಿನಿಧ್ಯದಿಂದ ವಂಚನೆ, ಬೆದರಿಕೆ , ಮೋಸ ಮತ್ತು ಅಪರಾಧಿಕ ಭಯೋತ್ಪಾದನೆಯಿಂದ ಕೃತ್ಯಗಳನ್ನು ಅಂತರ್ಜಾಲ ಅಥವಾ ಗಣಕಯಂತ್ರಗಳನ್ನು ಬಳಸಿಕೊಂಡು ಮಾಡಲಾಗುತ್ತದೆ. ಸೈಬರ್ ಅಪರಾಧಗಳು ಗಣಕಯಂತ್ರಗಳು ಅಥವಾ ಅಪರಾಧದ ಗುರಿಯಾಗಿ ಎಲ್ಲಿ ಕಂಪ್ಯೂಟರ್ ಜಾಲವಿರುವುದೋ ಅವುಗಳ ಮೂಲಕ ಮಾಡಲಾಗುವ ಅಪರಾದಗಳನ್ನು ಒಳಗೊಂಡಿದೆ. ಈ ವರ್ಗೀಕರಣವು ದಾಖಲೆಗಳ ನಾಶ, ಅಂಕಿ ಅಂಶಗಳ ಕಳವು, ವ್ಯವಸ್ಥೆಗಳ ಅತಿಕ್ರಮಣ ಪ್ರವೇಶ ಮುಂತಾದ ಅಪರಾಧಗಳನ್ನು ಒಳಗೊಂಡಿದೆ. ಸಮೀಕ್ಷೆಯ ಪ್ರಕಾರ ಸೈಬರ್ ಅಪರಾಧಗಳಿಗೆ ಮೂಲ ಕಾರಣವೆಂದರೆ ದುರ್ಬಲ ಆಂತರಿಕ ನಿಯಂತ್ರಣ

ಪದ್ಧತಿಗಳು, ಸೈಬರ್ ಅಪರಾಧಗಳ ವಿರುದ್ಧ ಕ್ರಮ ಕೈಗೊಳ್ಳುವುದರಲ್ಲಿ ನಿಕಾಯ ಸಂಸ್ಥೆಯ ಹಿಂಜರಿತ , ನೈತಿಕ ಮೌಲ್ಯಗಳ ಬೀಳು, ಗುರಿಯ ಲೋಪ ಮುಂತಾದವುಗಳು. ಭಾರತದಲ್ಲಿ ಸೈಬರ್ ಅಪರಾಧಗಳ ಬಹುಪಾಲು ಮಾನಹಾನಿ ಮತ್ತು ತಿರಸ್ಕಾರ ರೂಪದ ಭಾಷಣದಂತಹ ಅಪರಾಧಗಳನ್ನು ಒಳಗೊಂಡಿದ್ದು ಅಂತಹ ಅಪರಾಧಗಳಲ್ಲಿ ವಿದ್ಯುನ್ಮಾನ-ಅಪರಾಧದ ನೌಕರರನ್ನು ಗುರುತಿಸಬಹುದಾಗಿದೆ.

ಸೈಬರ್ ಅಪರಾಧಗಳನ್ನು ಎರಡು ರೀತಿಯಿಂದ ಮಾಡಬಹುದು. 1. ಗಣಕಯಂತ್ರಗಳನ್ನು ಗುರಿಯಾಗಿಸಿಕೊಂಡು ಮಾಡಬಹುದು. ಉದಾಹರಣೆಗೆ :- ಒಂದು ಗಣಕಯಂತ್ರವನ್ನು ಬಳಸಿಕೊಂಡು ಇತರ ಗಣಕಯಂತ್ರಗಳನ್ನು ದಾಳಿ ಮಾಡಬಹುದು. 2. ಗಣಕಯಂತ್ರವನ್ನು ಒಂದು ಆಯುಧವನ್ನಾಗಿ ಬಳಸಿಕೊಳ್ಳುವುದು. ಉದಾಹರಣೆಗೆ:- ಸೈಬರ್ ಭಯೋತ್ಪಾದನೆ, ಕೆಡಿಟ್ ಕಾರ್ಡ್ ವಂಚನೆಗಳು, ಫ್ರೋನೋಗ್ರಾಫಿ ಮುಂತಾದವುಗಳು.

ಸೈಬರ್ ಅಪರಾಧಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು.

1. ಸರಕಾರದ ವಿರುದ್ಧ ಮಾಡಲಾದ ಅಪರಾಧಗಳು- ಉದಾಹರಣೆಗೆ :- ಸೈಬರ್ ಭಯೋತ್ಪಾದನೆ
2. ವ್ಯಕ್ತಿಗಳ ವಿರುದ್ಧ ಮಾಡಲಾದ ಅಪರಾಧಗಳು- ಉದಾಹರಣೆಗೆ :- ವೈಯಕ್ತಿಕ ಮಾನಹಾನಿ
3. ಸ್ವತ್ತುಗಳ ವಿರುದ್ಧ ಮಾಡಲಾದ ಅಪರಾಧಗಳು- ಉದಾಹರಣೆಗೆ :- ಜೂಜಾಟ, ಬೌಧಿಕ ಆಸ್ತಿಯ ಉಲ್ಲಂಘನೆಗಳು ಮತ್ತು ಕ್ರೆಡಿಟ್ ಕಾರ್ಡ್ ವಂಚನೆಯಂತಹ ಆರ್ಥಿಕ ವಂಚನೆಗಳು.

ಸೈಬರ್ ಕ್ಷೇತ್ರದ ಸಮಸ್ಯೆಗಳು ತನ್ನಲ್ಲಿ ಹಲವಾರು ವಿವಾದಾಂಶಗಳನ್ನು ಹೊಂದಿದೆಯೆಂದು ಹೇಳಬಹುದು. ಮೊದಲನೆಯದಾಗಿ ಮತ್ತು ಸಾಮಾನ್ಯವಾಗಿರುವಂತಹ ವಿವಾದವೆಂದರೆ ಸೈಬರ್ ಅಪರಾಧಗಳು ಮತ್ತು ಸೈಬರ್ ಅಪರಾಧಿಗಳು, ಎರಡನೆಯ ಮತ್ತು ನಿಗದಿತ ವಿವಾದವೆಂದರೆ ವ್ಯಾಪ್ತಿಯ ಒಳಗೊಳ್ಳುವಿಕೆ ಮತ್ತು ಸ್ಥಳೀಯ ಮತ್ತು ಅಂತರಾಷ್ಟ್ರೀಯ ನ್ಯಾಯದಾನದ ಕ್ಷೇತ್ರಗಳು ಸೈಬರ್ ಕ್ಷೇತವು ಪ್ರಪಂಚದ ಯಾವುದೇ ಮೂಲೆಗೆ ತಾನು ತಲುಪಬಹುದಾಗಿದ್ದು ಪುನಃ ಸಾಕಷ್ಟು ಸಮಸ್ಯೆಗಳಿಗೆ ಮೂಲವಾಗಿದೆ.

ಬಾಲಕರ ಮೇಲಿನ ಅಶ್ಲೀಲತೆಯನ್ನು ಕುರಿತಾಗಿ ಜಗತ್ತಿನ ಎಲ್ಲಾ ದೇಶಗಳಲ್ಲಿ ನಿಷೇಧವನ್ನು ಹೇರಲಾಗಿದೆ. ಭಾರತದಲ್ಲಿ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ರ ಕಲಂ.67-ಬಿ ಯ ಉಪಬಂಧಗಳು ವಿಧ್ಯುನ್ಮಾನದ ರೂಪದಲ್ಲಿ ಬಾಲಕರು ಲೈಂಗಿಕ ಕೃತ್ಯಗಳಲ್ಲಿ ತೊಡಗಿರುವುದನ್ನು ಕುರಿತು ಪ್ರಕಟಿಸುವುದನ್ನಾಗಲೀ ಅಥವಾ ಪ್ರಸಾರ ಮಾಡುವುದನ್ನಾಗಲೀ ನಿಷೇಧಿಸುತ್ತದೆ. ಕಲಂ.67.ಬಿ ಯಿಂದ ಬರಹಗಳನ್ನು ಸೃಷ್ಟಿಸುವುದನ್ನು ಅಥವಾ ಗಣಕೀಕೃತ ಚಿತ್ರಗಳನ್ನು ಸಿದ್ಧಪಡಿಸುವುದನ್ನು ಸಂಗ್ರಹಿಸುವುದನ್ನು, ನೋಡುವುದನ್ನು ಪ್ರಚುರಪಡಿಸುವುದನ್ನು ಹಂಚಿಕೆ ಮಾಡುವುದನ್ನು, ಬದಲಾಯಿಸುವುದನ್ನು ಅಥವಾ ಬಾಲಕರು ಅಶ್ಲೀಲವಾಗಿ ಕಾಣಿಸಿಕೊಂಡಿರುವುದನ್ನು ತೋರಿಸುವ ಚಿತ್ರಗಳನ್ನು ಹಂಚುವುದನ್ನು ನಿಷೇಧಿಸುತ್ತದೆ. ಯಾವನೇ ವ್ಯಕ್ತಿಯು ಮಕ್ಕಳನ್ನು ಲೈಂಗಿಕವಾಗಿ ಬಳಸುವುದರ ಕುರಿತು ಕೃತ್ಯಗಳನ್ನು ಅಂತರ್ಜಾಲದ ಮೇಲೆ ತೋರಿಸಿದರೆ ಅಥವಾ ವಿಧ್ಯುನ್ಮಾನ ದಾಖಲೆಗಳಲ್ಲಿ ತನಗಾಗಿಯಾಗಲಿ ಇತರರ ನೋಟಕ್ಕಾಗಲೀ ಒದಗಿಸಿದರೆ ಅಂತಹ ವ್ಯಕ್ತಿಯು ಐದು ವರ್ಷಗಳ ಕಾಲಾವಧಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯ ಶಿಕ್ಷೆಗೆ ದಂಡನಾರ್ಹನಾಗುತ್ತಾನೆ.

ತಂತ್ರಜ್ಞಾನವು ಮುಂದುವರಿದಂತೆ ಜನರು ತನ್ನ ಅತಿ ಸೂಕ್ಷ್ಮ ಮಾಹಿತಿಗಳನ್ನು ಸಂಗ್ರಹಿಸಿ ಇಡಲು ಇಂಟರ್‌ನೆಟ್‌ನ ಮೊರೆ ಹೋಗುತ್ತಾರೆ. ಎಫ್.ಬಿ.ಐ.ನ ಇಂಟರ್‌ನೆಟ್ ಅಪರಾಧ ದೂರು ಕೇಂದ್ರದ ಪ್ರಕಾರ 2014ರಲ್ಲಿ 2,69,422 ದೂರುಗಳು ದಾಖಲಾಗಿವೆ. 1.5 ಮಿಲಿಯನ್ ಸೈಬರ್ ದಾಳಿಯಾಗುತ್ತಿದೆ. ಇದರ ಅರ್ಥ ದಿನಕ್ಕೆ 4000 ದಾಳಿ, ಗಂಟೆಗೆ 170 ದಾಳಿ ಅಂತೆಯೇ ಒಂದು ನಿಮಿಷಕ್ಕೆ 3 ದಾಳಿ ನಡೆಯುತ್ತಿದೆ. ಒಬ್ಬ ವ್ಯಕ್ತಿಯು ಇಂಟರ್‌ನೆಟ್‌ನ್ನು ಬಳಸುತ್ತಿದ್ದಾನೆ ಅಂದರೆ ಆತನು ಪರೋಕ್ಷವಾಗಿ ಬಲಿಪಶುವಾದಂತೆ. ಇದರಿಂದ ಹೇಗೆ ಎಚ್ಚತ್ತುಕೊಳ್ಳಬೇಕು ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

**ಸಂಗ್ರಹ**






ಕು. ಅನಿತ ಸುವಾರಿಸ್

ವ್ಯಕ್ತಿಯೊಬ್ಬ ಪ್ರತಿನಿತ್ಯ ಮಾದಕ ವಸ್ತುಗಳನ್ನು ಬಳಸುವ ಅನಾರೋಗ್ಯಕರ ಪ್ರವೃತ್ತಿಯನ್ನು ಮಾದಕ ದ್ರವ್ಯ ವ್ಯಸನ (ಡ್ರಗ್ ಅಡಿಕ್ಷನ್) ಅಥವಾ ಮಾದಕ ವಸ್ತುಗಳ ದುರುಪಯೋಗ ಎನ್ನುವರು. ಇದನ್ನು ಸೇವಿಸಿದರೆ ಮಾತ್ರ ಸ್ವಾಭಾವಿಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಈ ವ್ಯಸನಕ್ಕೆ ದಾಸರಾದವರು ಭಾವಿಸುತ್ತಾರೆ. ವ್ಯಕ್ತಿಯೊಬ್ಬ ಪ್ರತಿದಿನ ನಿರಂತರವಾಗಿ ಮಾದಕ ವಸ್ತುಗಳನ್ನು ಬಳಸಲು ಹಂಬಲಿಸುತ್ತಿದ್ದರೆ, ಅದಕ್ಕಾಗಿ ಹಾತೊರೆಯುತ್ತಾರೆ ಮತ್ತು ಅದರ ಹೊರತಾಗಿ ಬದುಕಲು ಸಾಧ್ಯವೇ ಇಲ್ಲ ಎಂಬಷ್ಟು ಆ ಚಟಕ್ಕೆ ಅವಲಂಬಿತರಾಗಿರುತ್ತಾರೆ. ಮಾದಕ ವ್ಯಸನವು ಗಂಭೀರವಾದ ಭಾವನಾತ್ಮಕ, ದೈಹಿಕ ಮತ್ತು ಸಾಮಾಜಿಕ ಸಂಬಂಧಗಳ ಸಮಸ್ಯೆಗಳಿಗೆ ಕಾರಣವಾಗಬಹುದು. ಮಾನವನ ಮಿದುಳಿನ ಕಾರ್ಯವಿಧಾನವನ್ನು ಬದಲಾಯಿಸುವ ರಾಸಾಯನಿಕಗಳಿಗೆ ಡ್ರಗ್ ಅಥವಾ ಮಾದಕ ದ್ರವ್ಯ ಎಂದು ಕರೆಯಲಾಗುತ್ತದೆ. ಡ್ರಗ್ ಮಿದುಳಿಗೆ ಪ್ರವೇಶಿಸಿ, ಮಿದುಳಿನಲ್ಲಿ ಉತ್ಪಾದನೆಯಾಗುವ ನೈಸರ್ಗಿಕವಾದ ರಾಸಾಯನಿಕಗಳ ಪ್ರಮಾಣವನ್ನು ಕುಗ್ಗಿಸುತ್ತದೆ. ಕಾಫಿ, ಮದ್ಯ, ತಂಬಾಕು, ದೀರ್ಘ ಕಾಲದ ಔಷಧ ಸೇವನೆ, ಮನೋಲ್ಲಾಸಕ್ಕಾಗಿ ಬಳಸುವ ಕೃತಕ ಸಾಧನಗಳು ಮುಂತಾದ ಎಲ್ಲವುಗಳನ್ನು ಡ್ರಗ್ಸ್ ಎಂದು ಕರೆಯುವರು.

ಧೂಮಪಾನ, ಗಾಂಜಾ ಮುಂತಾದವುಗಳನ್ನು ಸೇದುವುದು, ಇಂಜೆಕ್ಷನ್ ಚುಚ್ಚಿಕೊಳ್ಳುವುದು, ಜಗಿಯುವುದು ಮತ್ತು ಕುಡಿಯುವುದು ಮುಂತಾಗಿ ಅನೇಕ ವಿಧದಲ್ಲಿ ಮಾದಕ ದ್ರವ್ಯಗಳನ್ನು ಬಳಸ-ಲಾಗುತ್ತದೆ. ಭಾರತದಲ್ಲಿ ಮಾರಿಜುವಾನಾ, ಗಾಂಜಾ, ತಂಬಾಕು ಮತ್ತು ವೈದ್ಯರ ಸಲಹೆ ಪಡೆಯದೆ ಔಷಧಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉಪ-ಯೋಗಿಸುವುದು ಮುಂತಾದವು ವ್ಯಸನಿಗಳು ಹೆಚ್ಚಾಗಿ ಬಳಸುವ ಮಾದಕ ದ್ರವ್ಯಗಳು ಡ್ರಗ್ ಸೇವನೆಯಿಂದ ಮನುಷ್ಯನ ಮಿದುಳಿನ ನರಗಳಲ್ಲಿ ಡೊಪಮೈನ್ ಎನ್ನುವ ಸಂವಾಹಕ ಬಿಡುಗಡೆ ಆಗುತ್ತದೆ. ಯಾವಾಗ ನೀವು ಮಾದಕ ವಸ್ತುಗಳನ್ನು ಬಳಸುತ್ತಿರೋ ಇದು ಮೆದುಳಿನ ಸಂದೇಶದ ವ್ಯವಸ್ಥೆಯನ್ನು ಪುನರಾವರ್ತಿಸುತ್ತದೆ. ಹೀಗೆ ಡೊಪಮೈನ್ ಬಿಡುಗಡೆ ಆಗಿ ಮೆದುಳಿನಲ್ಲಿ ಸಂತೋಷ ಉಂಟಾಗುತ್ತದೆ. ಮೆದುಳು ಮತ್ತೆ ಮತ್ತೆ ಸಂತೋಷಪಡಲು ಬಯಸಿ, ಮಾದಕ ದ್ರವ್ಯವನ್ನು ಹೆಚ್ಚು ಹೆಚ್ಚಾಗಿ ಬಳಸುವಂತೆ ಉತ್ತೇಜಿಸುತ್ತದೆ. ನೀವು ನಿರಂತರವಾಗಿ ಮಾದಕ ವಸ್ತುಗಳನ್ನು ಸೇವಿಸಿದರೆ ಕ್ರಮೇಣವಾಗಿ ಮೆದುಳಿನ ಸೂಕ್ಷ್ಮತೆ ಕಡಿಮೆ ಆಗುತ್ತದೆ. ಮಾದಕ ದ್ರವ್ಯ ವ್ಯಸನದಿಂದ ಮೆದುಳಿನ ಆಲೋಚನಾ ಕ್ರಮದಲ್ಲಿ ಗೊಂದಲಗಳು ಉಂಟಾಗುತ್ತವೆ. ದೀರ್ಘಕಾಲದ ಡ್ರಗ್ ಸೇವನೆಯಿಂದ ಮೆದುಳಿನ ಅರಿವಿನ ಕಾರ್ಯಕ್ಷಮತೆಯನ್ನು ಹಾನಿಗೊಳಿಸಬಹುದು. ಅಧ್ಯಯನಗಳು ತಿಳಿಸುವಂತೆ, ದೀರ್ಘಕಾಲದ ಡ್ರಗ್ ಸೇವನೆಯಿಂದ ಮೆದುಳಿನ ಕ್ರಿಯೆಗಳಾದ ಕಲಿಕೆ, ತೀರ್ಪು, ನಿರ್ಧಾರ, ವರ್ತನೆ, ನಿಯಂತ್ರಣ ಮುಂತಾದವುಗಳ ನಿರ್ವಹಣೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದರೊಂದಿಗೆ ವ್ಯಕ್ತಿಗಳು ಕಾಲಕ್ರಮೇಣ ದುರ್ಬಲರಾಗಿ ಖಿನ್ನತೆ ಹಾಗೂ ಬೇರೆ ಬೇರೆ ರೀತಿಯ ಮಾನಸಿಕ ಅಸ್ವಸ್ಥತೆಗೆ ಒಳಗಾಗಬಹುದು.

# DREAMS



Nirnavi X 'A'

A heart without dreams is just like a bird without feather. Everyone have their own dream in their life and some of their dreams come true if we try then only we can attain success in our life. The future belongs on those who believe in their beauty of dream. Keep your dreams alive. Dreams can come true if we achieve to do the things in right time in right place.

Dream is not that we see in sleep. Dream is something that doesn't let you sleep.

***-Abdul Kalam***

I believe that imagination is stronger than knowledge consult not your fears but your hopes and your dreams life only then will be full beauty.

You never too old to set dream. What is not started today will not come to finish tomorrow.

A single dream is powerful than a thousand reality. Dream what you see not you hear.

---

# ಕವನಗಳು

ನಮ್ಮ ಮನೆಯ ಚಿಕ್ಕಪ್ಪ
ನಿನ್ನ ಮನೆಯ ದೊಡ್ಡಪ್ಪ
ಚಿಕ್ಕಪ್ಪ ದೊಡ್ಡಪ್ಪ ಸೇರಿಕೊಂಡು
ಮಾಡಿದರೊಂದು ನೆಯ್ಯಪ್ಪ.

ನಮ್ಮ ಮನೆಯ ಬಂಡ
ನಿಮ್ಮ ಮನೆಯ ಪುಂಡ
ಬಂಡ ಪುಂಡ ಸೇರಿ
ಕುಡಿದರೊಂದು ಬೊಂಡ.

ನಮ್ಮ ಮನೆಯ ಅತ್ತೆ
ಆಚೆ ಮನೆಯ ಕತ್ತೆ
ಕತ್ತೆಯನು ಓಡಿಸಿಕೊಂಡು
ಅತ್ತೆ ನಾಪತ್ತೆ.



**ಅನ್ಸಿಟಾ ಪಿಂಟೊ**
6ನೇ ತರಗತಿ
ಸ್ಯೆಂಟ್ ಜೋಸೆಫ್ ದ. ವರ್ಕರ್ ಶಾಲೆ
ವಾಮಂಜೂರು.

---





**Vikas**
**7th Std**





# ಪೆದ್ದ ನರಿ

**ರಾಹಿಲ್**
ಸಂತ ಜೋಸೆಫರ ಹಿರಿಯ ಪ್ರಾರ್ಥಮಿಕ ಶಾಲೆ,
ವಾಮಂಜೂರು

**ಒಂ**ದು ಊರಿನಲ್ಲಿ ಒಂದು ನರಿ ಮತ್ತು ತೋಳವೊಂದಿತ್ತು. ಇಬ್ಬರೂ ಗೆಳೆಯರಾಗಿದ್ದರು. ಒಂದು ದಿನ ತೋಳವು ಆಡಿನ ಗುಂಪಿನಿಂದ ಒಂದು ಆಡನ್ನು ಹಿಡಿದು ತಂದು ಗುಹೆಗೆ ಬಂತು. ಅಂದು ಅದು ಹೊಟ್ಟೆ ತುಂಬಾ ಆಡಿನ ಮಾಂಸ ತಿಂದಿತು. ಇದು ಮರುದಿನವೂ ಪುನರಾವರ್ತನೆಯಾಯಿತು. ತಮ್ಮ ಆಡಿನ ಗುಂಪಿನಿಂದ ಆಡುಗಳು ಕಾಣೆಯಾಗುತ್ತಿರುವುದು ಆಡು ಮೇಯಿಸುವವರಿಗೆ ಚಿಂತೆಯುಂಟು ಮಾಡಿತು. ಇತ್ತ ನರಿಯೂ ತುಂಬ ದಿನಗಳಿಂದ ತೋಳನನ್ನು ಕಾಣದೆ ಹುಡುಕುತ್ತಾ ಕಾಡಿನ ಒಂದು ಗುಹೆಯ ಬಳಿ ತಲುಪಿತು. ಅಂದು ತೋಳ ಗುಹೆಯಲ್ಲಿ ಇರಲಿಲ್ಲ. ಅಲ್ಲಿ ಹಲವಾರು ಆಡಿನ ಎಲುಬುಗಳನ್ನು ಗುಹೆಯಲ್ಲಿ ರಾಶಿ ಹಾಕಿದ್ದು ಕಂಡು ನರಿಗೆ ತುಂಬಾ ಸಿಟ್ಟು ಬಂತು. ನರಿಯು ಯೋಚಿಸಿತು, " ನಾನು ಹಲವು ದಿನ ಆಹಾರ ತಿನ್ನಲಿಲ್ಲ. ನನ್ನ ಗೆಳೆಯನಾದ ತೋಳನು ನನಗೆ ಗೊತ್ತಿಲ್ಲದ ಹಾಗೆ ಆಡಿನ ಮಾಂಸವನ್ನು ತಿಂದಿದ್ದಾನೆ. ಬರಲಿ  ನಾನು ತೋಳಗೆ ಬುದ್ಧಿ ಕಲಿಸುತ್ತೇನೆ". ಆಡಿನ ಮಾಲಿಕರಿಗೆ ತೋಳದ ಎಲ್ಲಾ ವಿಷಯವನ್ನು ಹೇಳಿತು. ಇದರಿಂದ ಸಿಟ್ಟುಗೊಂಡ ಆಡಿನ ಮಾಲಿಕನು ತೋಳವನ್ನು ಸಾಯಿಸಲು ದೊಡ್ಡ ದೊಣ್ಣೆಯನ್ನು ಹಿಡಿದುಕೊಂಡು ಬಂದನು. ಆಡಿನ ಮಾಲಿಕ ತೋಳದ ಮುಂದೆ ಬಂದಾಗ ಆಡಿನ ಮಾಲಿಕನು ತೋಳಗೆ ಹೇಳಿತು. " ನನ್ನ ಆಡಿನ ಗುಂಪಿನಿಂದ ನೀನು ದಿನಾಲೂ ನನ್ನ ಹಲವು ಆಡನ್ನು ಕದ್ದುಕೊಂಡು ಬಂದಿದ್ದೀಯ, ನಾನು ಇಂದು ಬಿಡಲಾರೆ" ಎಂದು ದೊಣ್ಣೆಯನ್ನು ತಲೆಗೆ ಹೊಡೆಯಲು ಹೋಗುವಾಗ ತೋಳವು ಹೇಳಿತು "ನಿಲ್ಲಿ, ನನ್ನ ಗೆಳೆಯನಾದ ನರಿ ಸುಳ್ಳು ಹೇಳಿದ್ದು, ನಾನು ನರಿ ವಾಸಿಸುವ ಗುಹೆಯನ್ನು ತೋರಿಸುತ್ತೇನೆ, ಅಲ್ಲಿ ಅವನು ಹಲವು ಆಡುಗಳನ್ನು ತಿಂದ ಮಾಂಸವನ್ನು ತೋರಿಸುತ್ತೇನೆ." ಎಂದು ಸುಳ್ಳು ಹೇಳಿತು. ಹೀಗೆ ಆಡಿನ ಮಾಲಿಕನು ತೋಳ ಹೇಳಿದ ಮಾತು  ಕೇಳಿ ತೋಳದ ಹಿಂದೆ ಹೋಯಿತು. ತೋಳವು ತಾನು ವಾಸಿಸಿದ ಗುಹೆಯನ್ನು ತೋರಿಸಿತು. ಇದರಿಂದ ಸಿಟ್ಟುಗೊಂಡ ಆಡಿನ ಮಾಲಿಕನು ನರಿಗೆ ದೊಣ್ಣೆಯಿಂದ ಹೊಡೆದು ಸಾಯಿಸಿತು.

***ನೀತಿ: ಅತಿಯಾದ ಸಿಟ್ಟು  ಒಳ್ಳೆಯದಲ್ಲ.***

# ಇಲಿ ಮತ್ತು ಕಪ್ಪೆ



ಇಲಿ ಮತ್ತು ಕಪ್ಪೆ ಸ್ನೇಹಿತರಾಗಿದ್ದವು. ತಾವು ಎಂದೆಂದಿಗೂ ಬೇರೆಯಾಗಬಾರದೆಂದು ತೀರ್ಮಾನಿಸಿದವು. ಅದಕ್ಕಾಗಿ ಅವೆರಡೂ ತಮ್ಮ ಬಾಲಗಳನ್ನು ಹಗ್ಗದಿಂದ ಸೇರಿಸಿ ಕಟ್ಟಿಕೊಂಡವು. ಸ್ವಲ್ಪ ಸಮಯದ ನಂತರ ಒಂದು ದಿನ ಕಪ್ಪೆ ನೀರಿಗೆ ಹಾರಿತು. ಅದರ ಬಾಲಕ್ಕೆ ತನ್ನ ಬಾಲವನ್ನು ಕಟ್ಟಿಕೊಂಡಿದ್ದುದರಿಂದ ಇಲಿಯೂ ಅದರ ಜೊತೆಗೇ ನೀರಿಗೆ ಬಿತ್ತು.

ಈಜು ಬಾರದೇ ಇದ್ದುದರಿಂದ ಇಲಿ ಸತ್ತುಹೋಯಿತು. ನೀರಿನಲ್ಲಿ ತೇಲುತ್ತಿದ್ದ ಸತ್ತ ಇಲಿಯನ್ನು ಒಂದು ಹದ್ದು ನೋಡಿತು. ಕೂಡಲೇ ಅದು ಇಲಿಯನ್ನು ಕಚ್ಚಿಕೊಂಡು ಹಾರಿತು. ಇಲಿಯ ಜೊತೆಯಲ್ಲಿಯೇ ಕಪ್ಪೆಯೂ ಕೂಡಾ ಹೋಯಿತು. ಹದ್ದು ಎರಡನ್ನೂ ತಿಂದು ಹಾಕಿತು.

***ನೀತಿ: ಮೂರ್ಖರೊಡನೆ ಸಂಬಂಧ– ಮೃತ್ಯುವಿಗೆ ಆಹ್ವಾನ***



**ಮೆಕ್ವಿನ್ ಕರ್ನೆಲಿಯೊ**
ಸೈಂಟ್ ಜೋಸೆಫ್ ದ. ವರ್ಕರ್ ಸ್ಕೂಲ್,
ವಾಮಂಜೂರು




Sunitha - 8th Std




Bikash - 8th A





G Haleema Laeesha









Meloon
9th A Std






**Meloon**
**9th A Std**





**Melroy Sharon**
**9th A**





**Thanvitha**
**7th Std**





**Princia D'Souza**
**6th Std**



**Sneha 9th A Std**



**Thanvitha 7th Std**











Shreya 9th A

*With Best Compliments From*






*With Best Compliments From*




*With Best Compliments From*




With Best Compliments From
Lawrence & Rosy Crasta


BIRTHDAY WISHES
Roshal Pearl Rebello
From
Roshan & Priya Rebello